II. 1997-98ನೇ ಸಾಲಿನಲ್ಲಿ ಖರ್ಚು ಮಾಡದಿರಲು ಕಾರಣಗಳು

1. ಅಪೇಕ್ಷಣಾ ಮತ್ತು ಇಳಿದಾಣ ನಿರ್ಮಾಣ ಯೋಜನೆಯಡಿಯಲ್ಲಿ ಟೆಂಡರ್‌ಗಳನ್ನು ಅಂತಿಮಗೊಳಿಸಿ ಕಾರ್ಯ ಪ್ರಾರಂಭ ಮಾಡುವುದರಲ್ಲಿ ವಿಳಂಬವಾಗಿರುವುದರಿಂದ ಹಾಗೂ ಕರ್ನಾಟಕ ಕರಾವಳಿ ಮೀನುಗಾರಿಕೆ ಅಧಿನಿಯಮ ಅನುಷ್ಠಾನಕ್ಕಾಗಿ ಗಸ್ತು ದೋಣಿಗಳ ಖರೀದಿ ತಾಂತ್ರಿಕ ಕಾರಣಗಳಿಂದಾಗಿ ಸಾಧ್ಯವಾಗದ ಕಾರಣ ಹಣ ಉಳಿತಾಯವಾಗಿರುತ್ತದೆ.

2. ಕೇಂದ್ರ ಪುರಸ್ಕೃತ ಸಮಗ್ರ ಜಲಾಶಯ ಮೀನುಗಾರಿಕೆ ಯೋಜನೆ ಅನುಷ್ಠಾನಕ್ಕೆ ಅನುಮತಿ ದೊರಕದ ಕಾರಣ ಹಾಗೂ ಬಹುದಿನ ದೂರ ಸಮುದ್ರ ಮೀನುಗಾರಿಕೆ ಯೋಜನೆ ಅನುಷ್ಠಾನಕ್ಕೆ ಮಂಜೂರಾತಿ ದೊರಕದಿಲ್ಲವಾದ ಕಾರಣ ಹಾಗೂ ಒಳನಾಡು ಮೀನುಗಾರಿಕೆ ಮಾರುಕಟ್ಟೆ ಪೂರ್ವಭಾವಿ ಸಿದ್ದತೆಯ ಪೂರ್ವ ಸಿದ್ದತೆಗಾಗಿ ಹಮ್ಮಿಕೊಂಡ ಯೋಜನೆಗಳಿಗೆ ಪೂರ್ಣವಾಗಿ ಹಣ ಬಿಡುಗಡೆಯಾಗದ ಕಾರಣ ಅನುದಾನವು ಉಳಿತಾಯವಾಗಿರುತ್ತದೆ.

ಇ) ಪ್ರತಿ ಲೀಟರ್‌ಗೆ ಹೆಚ್ಚಿರುವ ತೆರಿಗೆ ಮೇಲಿನ ಸೂಕ್ತ ಸಹಾಯ ಧನವನ್ನು ನೀಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಈ) ರಾಜ್ಯ ಆಯವ್ಯಯದಲ್ಲಿ ಲಭ್ಯವಿರುವ ಹಣದಲ್ಲಿ ಈ ಅನುದಾನ ಒದಗಿಸಲಾಗಿದೆ. ಇರುವ ಎಲ್ಲಾ ಅನುದಾನವನ್ನು ಉಪಯೋಗಿಸಿಕೊಂಡರೆ ಮೀನುಗಾರಿಕೆ ಕಡೆಗಣಿಸಿದಂತೆ ಆಗುವುದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯ ಲೋಕೋಪಯೋಗಿ ರಸ್ತೆಗಳ ದುರಸ್ತಿ

784 - ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಲೋಕೋಪಯೋಗಿ ಇಲಾಖೆಯ ರಸ್ತೆಗಳ ಸಂಖ್ಯೆ ಎಷ್ಟು? (ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು)

ಆ) ಈ ಜಿಲ್ಲೆಗೆ ಲೋಕೋಪಯೋಗಿ ಇಲಾಖೆಯಿಂದ ರಸ್ತೆ ಅಭಿವೃದ್ಧಿಗಾಗಿ ಕಳೆದ 3 ವರ್ಷಗಳಲ್ಲಿ ಬಿಡುಗಡೆಯಾದ ಹಣವೆಷ್ಟು?

ಇ) ಲೋಕೋಪಯೋಗಿ ಇಲಾಖೆಯಿಂದ ಹಣ ಬಿಡುಗಡೆ ಆಗದೆ ಉಳ್ಳಾಲ ವಿಧಾನ ಸಭಾ ಕ್ಷೇತ್ರದಲ್ಲಿ ರಸ್ತೆ ಪೂರ್ತಿ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಉಳ್ಳಾಲ ವಿಧಾನ ಸಭಾ ಕ್ಷೇತ್ರದ ಲೋಕೋಪಯೋಗಿ ರಸ್ತೆಗಳ ಅಭಿವೃದ್ಧಿಗೆ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡುವುದು ಹಾಗೂ ಯಾವಾಗ ರಸ್ತೆ ಅಭಿವೃದ್ಧಿ ಪೂರ್ಣಗೊಳಿಸುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯ ಲೋಕೋಪಯೋಗಿ ಇಲಾಖೆ ರಸ್ತೆಗಳ ಉದ್ದ 1132 ಕಿಮೀ. ರಸ್ತೆಗಳ ಸಂಖ್ಯೆ:130. (ಅನುಬಂಧ-1ರಲ್ಲಿ ವಿವರ ನೀಡಿದೆ)

ಆ) 1995-96 396.35 ಲಕ್ಷ ರೂ.

1996-97 293.50 ಲಕ್ಷ ರೂ.

1997-98 208.35 ಲಕ್ಷ ರೂ.

ಇ) ಇಲ್ಲ.

ಈ) ಅನುದಾನ ಲಭ್ಯತೆ ಮೇರೆಗೆ ಈ ಸಾಲಿನಲ್ಲಿ ರಸ್ತೆ ಅಭಿವೃದ್ಧಿ ಕೈಗೊಳ್ಳಲಾಗುವುದು.

ಎಲ್‌ಎಕ್ಯೂ-1407

ಅನುಬಂಧ-1

ಕ್ರ. ಸ.	ವಿಧಾನ ಸಭಾ ಕ್ಷೇತ್ರ	ರಸ್ತೆಯ ಉದ್ದ (ಕಿ.ಮೀ.ಗಳಲ್ಲಿ)				ಒಟ್ಟು
		ರಾಜ್ಯ ಹೆದ್ದಾರಿ		ಜಿಲ್ಲಾ ಮುಖ್ಯ ರಸ್ತೆ		
		ಸಂಖ್ಯೆ	ಉದ್ದ	ಸಂಖ್ಯೆ	ಉದ್ದ	
1	2	3	4	5	6	7
1.	ಮಂಗಳೂರು	3	10	3	10	20
2.	ಉಳ್ಳಾಲ	-	-	16	77	77
3.	ಸುರತ್ಕಲ್	2	23	19	67	90
4.	ಬಂಟ್ವಾಳ	2	38	10	82	120
5.	ವಿಟ್ಲ	2	25	19	111	136
6.	ಪುತ್ತೂರು	2	38	13	112	150
7.	ಸುಳ್ಯ	2	65	14	200	265
8.	ಬೆಳ್ತಂಗಡಿ	3	120	11	100	220
9.	ಮುಲ್ಕಿ-ಮೂಡಬಿದ್ರೆ *(ಭಾಗಶಃ)*	2	24	7	30	54
	ಒಟ್ಟು	**18**	**343**	**112**	**789**	**1132**

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನಲ್ಲಿರುವ ಉಳ್ಳಾಲ ವಿಧಾನ ಸಭಾ ಕ್ಷೇತ್ರದಲ್ಲಿ ಒಟ್ಟು 77 ಕಿ.ಮೀ. ಉದ್ದದ 16 ರಸ್ತೆಗಳಿದ್ದು, ಇವುಗಳ ವಿವರ ಈ ಕೆಳಕಂಡಂತಿದೆ :

1.	ಮಂಗಳೂರು - ಚರ್ಮತ್ತೂರು ಕರಾವಳಿ ರಸ್ತೆ	-	5.20 ಕಿ.ಮೀ
2.	ಉಳ್ಳಾಲ ಜಟ್ಟಿ ರಸ್ತೆ	-	1.80 ಕಿ.ಮೀ
3.	ಮಾಣಿ-ಉಳ್ಳಾಲ ರಸ್ತೆ	-	12.60 ಕಿ.ಮೀ
4.	ಕೋಟಿಕಾರು-ಪಾತೂರು ರಸ್ತೆ	-	7.10 ಕಿ.ಮೀ.
5.	ನರಿಂಗಾಣ - ತಾಡುಗೋಳಿ ರಸ್ತೆ	-	2.30 ಕಿ.ಮೀ.
6.	ಪೆರ್ಮನ್ನೂರು-ಪಾವೂರು ರಸ್ತೆ	-	9.00 ಕಿ.ಮೀ.
7.	ನಾಟಿಕಲ್-ಮಂಜನಾಡಿ ರಸ್ತೆ	-	4.50 ಕಿ.ಮೀ.
8.	ಪಡೀರ್-ಆದ್ಯಾರು ರಸ್ತೆ	-	6.00 ಕಿ.ಮೀ.
9.	ಉಚ್ಚಿಲ-ದೇರಳಕಟ್ಟೆ ರಸ್ತೆ	-	6.20 ಕಿ.ಮೀ
10.	ಉಚ್ಚಿಲಕದವಿನಿಂದ ರೈಲ್ವೆ ಸ್ಟೇಶನ್ ರಸ್ತೆ	-	2..60 ಕಿ.ಮೀ
11.	ಪಡೀರ್-ಇನ್ನೋಳಿ ರಸ್ತೆ	-	5.80 ಕಿ.ಮೀ
12.	ಕೂಳೂರು-ತಣ್ಣೀರು ಬಾವಿ-ಚಿಂಗ್ರೆ ರಸ್ತೆ	-	2.70 ಕಿ.ಮೀ
13.	ಪಡೀಲ್-ಬಜಾರ್-ಜಪ್ಪಿನಮೊಗರು ರಸ್ತೆ	-	3.00 ಕಿ.ಮೀ
14.	ಸಂತೂರು-ಪೈಸಲ್‌ನಗರ-ಕಂದನಾಡಿ ರೈಲ್ವೆ ಸ್ಟೇಶನ್ ರಸ್ತೆ	-	1.00 ಕಿ.ಮೀ
15.	ದೇರಳಕಟ್ಟೆ-ಬರುವ ರಸ್ತೆ	-	4.00 ಕಿ.ಮೀ
16.	ಉಳ್ಳಾಲ-ಕೋಟಿಯಿಂದ ರೈಲ್ವೆ ಸ್ಟೇಶನ್ ರಸ್ತೆ	-	2.40 ಕಿ.ಮೀ

ರಾಜ್ಯದಲ್ಲಿ ಅಬಕಾರಿ ಬಾಕಿ

785 - ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಅಬಕಾರಿ ಇಲಾಖೆಯಿಂದ ಕಳೆದ ಎರಡು ವರ್ಷಗಳಿಂದ ಬಂದ ಮೊತ್ತವೆಷ್ಟು?*

2. *ಅಬಕಾರಿ ತೆರಿಗೆ ಮತ್ತು ಇತರೆ ತೆರಿಗೆಗಳಿಂದ ಸರ್ಕಾರದ ಬೊಕ್ಕಸಕ್ಕೆ ಪಾವತಿಯಾಗದ ಹಣವೆಷ್ಟು? ಮತ್ತು ಯಾರಿಂದ ಎಷ್ಟು ಬಾಕಿ ಇದೆ?*

3. *ಬಾಕಿ ವಸೂಲಾತಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?*

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :